## ಅಧ್ಯಾಯ-೧೨
# ಪ್ರೇಕ್ಷಣೀಯ ಸ್ಥಳಗಳು

ಪಶ್ಚಿಮ ಮತ್ತು ಪೂರ್ವ ಘಟ್ಟಗಳು ಸಂಗಮಿಸುವ ನೀಲಗಿರಿ ಶ್ರೇಣಿಯಿಂದಾಗಿ ಮೈಸೂರು ಜಿಲ್ಲೆಯು ದಟ್ಟವಾದ ಅರಣ್ಯ, ವನ್ಯಮೃಗ ಸಂಪತ್ತು, ಸುಂದರವಾದ ಗಿರಿಧಾಮ, ಬೆಟ್ಟಗುಡ್ಡ ನದಿಗಳಿಂದ ಕೂಡಿ ಆಕರ್ಷಣೀಯವಾಗಿದ್ದು ಪ್ರವಾಸಿಗರ ತಾಣವಾಗಿದೆ. ಗಂಗ, ಹೊಯ್ಸಳ, ವಿಜಯನಗರ ಹಾಗೂ ಮೈಸೂರು ಅರಸರ ಕಾಲದಲ್ಲಿ ತಾಲೂಕಿನ ವಿವಿಧೆಡೆ ಸುಂದರವಾದ ದೇವಾಲಯಗಳು, ಎತ್ತರವಾದ ಗೋಪುರ ಹಾಗೂ ದೀಪ ಸ್ತಂಭಗಳು ಅವರ ಕಲಾಭಿರುಚಿಯ ಸಂಕೇತವಾಗಿ ವಿಪುಲವಾಗಿ ನಿರ್ಮಾಣಗೊಂಡವು. ಗಂಗರ ಕಾಲದ ನೇರಳೆ, ಹೈರಿಗೆ, ಮಾಗುಡಿಲು, ಚೋಳ-ಹೊಯ್ಸಳ ಕಾಲದ ಅರಕನಾಥಪುರ (ಅರ್ಕೇಶ್ವರ), ಮಗ್ಗೆ(ಬಾಣೇಶ್ವರ), ತೊರವಳ್ಳಿಯ ಮಾವಳೇಶ್ವರ ಮುಂತಾದವು ಉಲ್ಲೇಖಾರ್ಹ. ಹೆಗ್ಗಡದೇವನಕೋಟೆ ತಾಲೂಕಿನಲ್ಲಿರುವ ಪ್ರಮುಖವಾದ ಪ್ರೇಕ್ಷಣೀಯ ಸ್ಥಳಗಳ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಮಹತ್ವವನ್ನಿಲ್ಲಿ 'ಅ'ಕಾರಾದಿಯಲ್ಲಿ ವಿವರಿಸಲಾಗಿದೆ. ಕಂಸದಲ್ಲಿ ನೀಡಿರುವ ಸಂಖ್ಯೆಯು ೨೦೦೧ರ ಜನಗಣತಿಯಂತೆ ಆಯಾ ಗ್ರಾಮದಲ್ಲಿದ್ದ ಜನಸಂಖ್ಯೆಯನ್ನು ಸೂಚಿಸುತ್ತದೆ.

**ಕಟ್ಟೆಮನುಗನಹಳ್ಳಿ (೧೪೪೩)** : ಹೊಯ್ಸಳ ಶಾಸನದಲ್ಲಿ ಮಣಿಗೆಹಳ್ಳಿ ಎಂದೇ ಉಲ್ಲೇಖಿತಗೊಂಡಿರುವ ಇದು, ಹೆಗ್ಗಡದೇವನಕೋಟೆಯಿಂದ ೧೫ ಕಿ.ಮೀ. ದೂರದಲ್ಲಿರುವ ಚಾರಿತ್ರಿಕ ಸ್ಥಳ. ಊರ ಬಸವನಗುಡಿ ಮುಂದಿರುವ ಸುಮಾರು ೯ನೆಯ ಶತಮಾನದ ಗಂಗಶಾಸನ, ನೀತಿಮಾರ್ಗ ಕೊಂಗುಣಿವರ್ಮನ ಆಳ್ವಿಕೆಯಲ್ಲಿ ಎರೆಯಪ್ಪರಸನು ನುಗು-ನವಲೆ ನಾಡುಗಳನ್ನು ಆಳುತ್ತಿದ್ದಾಗ, ಬಯಲ್ನಾಡ ಶತ್ರುಪಡೆ ಕೊತ್ತಮಂಗಲಕ್ಕೆ ಲಗ್ಗೆ ಇಟ್ಟು, ಗೋವುಗಳನ್ನು ಅಪಹರಿಸಿದಾಗ ಪೆರ್ವಯಲ ಕೊಂಗುಣಿ ಅವರನ್ನು ಹಿಮ್ಮೆಟ್ಟಿಸಿ, ಗೋವುಗಳನ್ನು ಸೆರೆಯಿಂದ ಬಿಡಿಸುವ ಸಂದರ್ಭದಲ್ಲಿ ಹತನಾದ ಪೆರ್ಮಾಡಿಗೌಡನ ಮಗನಾದ ರಾಮನ ಸಲುವಾಗಿ ಪೇರ್ಮಾಡಿ ಗೌಡನಿಗೆ ನಾಡಗೌಡಿಕೆಯನ್ನು ನೀಡಿ ಕಿರುವೊಸೂರನ್ನು ಕಲ್ನಾಡಾಗಿ ದತ್ತಿಬಿಟ್ಟಿದ್ದನ್ನು ತಿಳಿಸುತ್ತದೆ. ಹೊಳೆದಾರಿಯಲ್ಲಿರುವ ೧೨೬೪ರ ಶಾಸನ, ಪಾಂಡ್ಯ ದೇಶದ ಸ್ಥಾನಿಕ ನಾಗಿದೇವನು ನವಲೆನಾಡ ಮಣಿಗೆಹಳ್ಳಿಯ ರಾಮನಾಥದೇವರ ಪೂಜಾವಿಧಿಗೆಂದು ಮಲ್ಲೆಯ

ದಂಡನಾಯಕನ ಅಧಿಕಾರಾವಧಿಯಲ್ಲಿ ಕಲ್ಲಗಾಣವನ್ನು ಮಾಡಿಸಿದ್ದನ್ನು ತಿಳಿಸುತ್ತದೆ. ಇದರಿಂದ ರಾಮೇಶ್ವರ ದೇವಾಲಯವಿರುವ ಅಂಶ ವೇದ್ಯವಾಗುತ್ತದೆ. ಈ ಗುಡಿ ಗಂಗರ ಕಾಲದ ಮೇಲಿನ ಶಾಸನೋಕ್ತ ಯೋಧ ರಾಮನ ಸಲುವಾಗಿ ನಿರ್ಮಿಸಿದ ಗುಡಿಯಿರಬೇಕೆಂದು ತೋರುತ್ತದೆ. ಬಸವನಗುಡಿಯು ಪ್ರಾಚೀನ ಗುಡಿಯಾಗಿದೆ. ಮೇಲಿನ ಶಾಸನೋಕ್ತ ಕೊತ್ತವಂಗಲವೇ ಇಂದಿನ ಕೊತ್ತಗಾಲವಾಗಿದ್ದು, ಅಲ್ಲೂ ಮೂರ್‍ನಾಲ್ಕು ಶಾಸನಗಳಿವೆ.

**ಕಬಿನಿ ರಿವರ್ ಜಂಗಲ್ ಲಾಡ್ಜ್ :** ಇದು ೧೯೮೦ರಲ್ಲಿ ಪ್ರಾರಂಭವಾಯಿತು. ವೈಸ್‌ರಾಯ್ ಬಂಗಲೆ ಮತ್ತು ಮಹಾರಾಜ ಬಂಗಲೆಗಳು (ಕಾರಾಪುರ ಕ್ಯಾಂಪ್‌ನ ಅಂಗವಾಗಿ ಮಹಾರಾಜರು ಬೇಟೆಯಾಡಲು ಬಂದು ತಂಗುತ್ತಿದ್ದ ಬಂಗಲೆಗಳು) ೧೯೦೫ರ ಸುಮಾರಿನಲ್ಲಿಯೇ ನಿರ್ಮಾಣವಾದುವು. ಇಂದು ಕಬಿನಿ ರಿವರ್ ಜಂಗಲ್ ಲಾಡ್ಜ್ ಒಂದು ಆಕರ್ಷಣೀಯ ಸ್ಥಳವಾಗಿ ಮಾರ್ಪಟ್ಟಿದೆ. ಕಬಿನಿ ಯೋಜನೆಯಲ್ಲಿ ಮುಳುಗಡೆಯಾದ ಮಾಸ್ತಿಗುಡಿಯ ಅವಶೇಷಗಳು ಈಗಲೂ ಹಿನ್ನೀರು ಕಡಿಮೆಯಾದಾಗ ಕಾಣಬರುತ್ತವೆ. (ಹೊಸಗುಡಿಯನ್ನು ಬಳ್ಳೆ ಹತ್ತಿರ ಕಟ್ಟಿಸಲಾಗಿದೆ) ಮೈಸೂರಿನಿಂದ ೮೦ ಕಿ.ಮೀ. ದೂರದಲ್ಲಿ ಈ ಸ್ಥಳವಿದೆ.

**ಕಳ್ಳಂಬಾಳು (೨,೩೦೪) :** ಇದು ಸರಗೂರಿನಿಂದ ೨೦ ಕಿ.ಮೀ. ದೂರದಲ್ಲಿದೆ. ಇಮ್ಮಡಿ ಹೊಯ್ಸಳ ಬಲ್ಲಾಳನ ಕ್ರಿ.ಶ. ೧೨೧೧ರ ದಾಖಲೆ ಈ ಊರನ್ನು ಕಲ್ಲಂಬಾಳು ಕಲ್ಲಂಬಾರು ಎಂದು ಕರೆದಿದೆ. ಇಲ್ಲಿಂದ ಈವರೆಗೆ ಒಂಭತ್ತು ಶಾಸನಗಳು ವರದಿಯಾಗಿವೆ. ಇಲ್ಲಿ ಕಾಮೇಶ್ವರ ದೇವಾಲಯವಿದೆ. ಅದರ ನವರಂಗದ ಕಂಬದ ಮೇಲೆ ತಮಿಳಿನಲ್ಲಿ ಬರೆದಿರುವ ದಾಖಲೆಯಲ್ಲಿ ಕಳ್ಳಂಬಾಳನ್ನು 'ಕಲ್ಲಮ್ಬಾರು' ನಗರ ಎಂದು ಕರೆಯಲಾಗಿದೆ. ಇದಕ್ಕೆ 'ಸಿಲೆಪುರ' ಎಂಬ ಪ್ರತಿನಾಮಧೇಯವೂ ಇದ್ದ ಅಂಶ ೧೭೩೮ರ ಶಾಸನದಿಂದ ಗೊತ್ತಾಗುತ್ತದೆ. ಇಲ್ಲಿರುವ ಚೋಳ– ಹೊಯ್ಸಳ ಶೈಲಿಯ ಕಾಮೇಶ್ವರ ದೇವಾಲಯವು ವಿಶಾಲವಾಗಿದ್ದು, ಅದರ ಗರ್ಭಗೃಹಕ್ಕೆ ಇದ್ದ ಶಿಖರವಿಂದು ಕಣ್ಮರೆಯಾಗಿದೆ. ಶಾಸನಗಳಲ್ಲಿ ಕಲಿಯುಗ ಕಾಮೇಶ್ವರ ಎಂದೇ ಉಲ್ಲೇಖಿತಗೊಂಡಿರುವ ಈ ಗುಡಿಯ ಮುಂಭಾಗದಲ್ಲಿ ಅರ್ಧಮಂಟಪವಿದೆ. ಚೋಳ ಶೈಲಿಯ ಕೊಳವೆಯಾಕಾರದ ಕಂಬಗಳು ನವರಂಗದಲ್ಲಿವೆ. ಇಮ್ಮಡಿ ಬಲ್ಲಾಳನು ನುಗುವಿನ ಉತ್ತರತೀರದ ಯಜ್ಞ ಕಾಮೇಶ್ವರ ದೇವರ ಸೇವೆಗೆಂದು ಕುಂದೂರನ್ನು ದತ್ತಿ ಬಿಟ್ಟಿದ್ದು ೧೨೧೧ರ ಶಾಸನದಿಂದ ತಿಳಿಯುತ್ತದೆ. ಅಲ್ಲೇ ಇರುವ ೧೨೧೮ರ ಇನ್ನೊಂದು ಶಾಸನದಿಂದ ರಾಣಿ ಕೇತಲಮಹಾದೇವಿ ಆಳುತ್ತಿದ್ದಾಗ, ಅದೇ ಕುಂದೂರು ಗ್ರಾಮವನ್ನು ಕುಮಾರ ಮಾಧವ ದಂಡನಾಯಕರು ಪುನರ್ಭರಣ ಮಾಡಿದ ಅಂಶ ಗೊತ್ತಾಗುತ್ತದೆ. ನೆರೆಯ ಕುಂದೂರಿನ ೧೩೦೦ರ ಶಾಸನದಿಂದ ರಾಮೇಶ್ವರ ಗುಡಿಯ ತಿರುಮಲೋಕಮಂಟಪ ನಿರ್ಮಾಣಗೊಂಡ ಅಂಶ ವೇದ್ಯವಾಗುತ್ತದೆ. ಅಲ್ಲದೆ ಈ ಗುಡಿಯ ರಂಗಮಂಟಪದ ಕಂಬಗಳ ಮೇಲಿರುವ ಕಿರುಶಾಸನಗಳಿಂದ ರಂಗಮಂಟಪವು ನಂತರದ ಸೇರ್ಪಡೆಯೆಂಬ ಅಂಶ ವೇದ್ಯವಾಗುತ್ತದೆ. ನವರಂಗದ ಒಳಭಾಗದಲ್ಲಿ ಸಪ್ತಮಾತೃಕೆ, ಕಾರ್ತಿಕೇಯ, ಶಿವ, ವೀರಭದ್ರ, ಪಾರ್ವತಿ, ಬ್ರಹ್ಮ,

ಸರಸ್ವತಿ, ಉಮಾಮಹೇಶ್ವರ, ಮಹಿಷಾಸುರ ಮರ್ಧಿನಿ, ಸೂರ್ಯ, ಭೈರವ, ಚಾಮುಂಡಿ, ಮಹೇಶ್ವರಿ, ಮೊದಲಾದ ಮೂರ್ತಿಗಳಿವೆ. ಶಿಥಿಲವಾಗಿದ್ದ ಈ ದೇವಾಲಯವನ್ನು ೧೭೩೮ರಲ್ಲಿ, ಕಲ್ಲಹಳ್ಳಿ ಕುಲದ ಕಪ್ಪಣಗೌಡನು ಅಷ್ಟಬಂಧನ ಪೂರಕವಾಗಿ ಜೀರ್ಣೋದ್ಧಾರ ಮಾಡಿಸಿದ ಅಂಶ ಅಲ್ಲೇ ಇರುವ ಶಾಸನದಿಂದ ವೇದ್ಯವಾಗುತ್ತದೆ. ಹುಣಸಲೇಶ್ವರ, ಮಾರಿಗುಡಿ, ಚಿಕ್ಕದೇವರು, ನಾರಾಯಣಸ್ವಾಮಿ ದೇವಾಲಯಗಳು ಕಳ್ಳಂಬಾಳುವಿನಲ್ಲಿರುವ ಇನ್ನುಳಿದ ದೇವಸ್ಥಾನಗಳಾಗಿವೆ.

**ಕ್ಯಾತನಹಳ್ಳಿ (೨,೯೦೮)** : ಹೆಗ್ಗಡದೇವನಕೋಟೆಯಿಂದ ಪೂರ್ವಕ್ಕೆ ೩೪ ಕಿ.ಮೀ. ದೂರದಲ್ಲಿದ್ದು, ಹೊಯ್ಸಳರ ಕಾಲದಷ್ಟು ಪ್ರಾಚೀನ ಅವಶೇಷಗಳಿಲ್ಲಿವೆ. ಬೆಳತೂರಿನ ೧೨೫೫ ಶಾಸನದಲ್ಲಿ ಕೇತನಹಳ್ಳಿಯ ಮಲ್ಲಿಕಾರ್ಜುನ–ಬಾಣೇಶ್ವರ ಗುಡಿಗಳಿಗೆ ದತ್ತಿ ಬಿಟ್ಟ ಉಲ್ಲೇಖವೂ ಇದೆ. ಇಲ್ಲಿರುವ ಕ್ರಿ.ಶ. ೧೩೨೨ರ ಶಾಸನದಲ್ಲಿ ತಗಡೂರಿನ ಕೊವರಕೇತಗೌಡನು ೧೧೬೪ರಲ್ಲಿ ಕೇತನಹಳ್ಳಿಯನ್ನು ರೂಪಿಸಿ, ಮಲ್ಲಿನಾಥದೇವರ ದೇವಾಲಯ ಹಾಗೂ ಹೊಸಕೆರೆಗಳನ್ನು ನಿರ್ಮಿಸಿದರೆ, ಆತನ ಮಗ ಹೊಯ್ಸಳಗೌಡನು ಲಕ್ಷ್ಮೀನಾರಾಯಣ ದೇವರ ಸಹಿತ ಮಂಟಪವನ್ನು ಮಾಡಿಸಿದ್ದು, ಅದನ್ನು ೧೫೯ ವರ್ಷಗಳ ನಂತರ ೧೩೨೨ರಲ್ಲಿ ಸಮಸ್ತ ಪ್ರಭುಗಳು ಕೂಡಿ ಪುನರ್‌ಪ್ರತಿಷ್ಠೆ ಮಾಡಿಸಿ ದತ್ತಿ ಬಿಟ್ಟ ಅಂಶ ಗೊತ್ತಾಗುತ್ತದೆ. ಊರಿನ ಪೂರ್ವಭಾಗದಲ್ಲಿ ದ್ವಿಕುಟಾಚಲ ದೇವಸ್ಥಾನ (ಸ್ಥಳೀಯರು ಇದನ್ನು ಲಕ್ಷ್ಮೀಕಾಂತ ದೇವಸ್ಥಾನ ಎಂದು ಕರೆಯುತ್ತಾರೆ) ಇದೆ. ದೇವಸ್ಥಾನದ ದಕ್ಷಿಣದಲ್ಲಿ ಮಹಾದ್ವಾರವಿದೆ. ಗರ್ಭಗೃಹಗಳಲ್ಲೊಂದರಲ್ಲಿ ವಿಷ್ಣು, ಇನ್ನೊಂದರಲ್ಲಿ ಪೂರ್ವಕ್ಕೆ ಮುಖ ಮಾಡಿಕೊಂಡಿರುವ ಶಿವ ಅಥವಾ ಮಲ್ಲಿನಾಥನ ವಿಗ್ರಹಗಳಿವೆ. ಗುಡಿಯ ದಕ್ಷಿಣಕ್ಕಿರುವ ಬಾಗಿಲಿನಲ್ಲಿ ದ್ವಾರಪಾಲಕರಿದ್ದಾರೆ.

ನವರಂಗದಲ್ಲಿ ಗಂಟೆಯಾಕಾರದಲ್ಲಿ ಕಡೆದಿರುವ ಹೊಯ್ಸಳ ಕಂಬಗಳು ಸುಂದರವಾಗಿದ್ದು, ಮಧ್ಯದಲ್ಲಿ ನೃತ್ಯವೇದಿಕೆಯಿದೆ. ದಕ್ಷಿಣಕ್ಕಿರುವ ಅರ್ಧಮಂಟಪದ ದ್ವಾರದಲ್ಲಿ, ದಶಾವತಾರವನ್ನು ಕೆತ್ತಲಾಗಿದೆ. ಕೆಲವು ಮಿಥುನ ಶಿಲ್ಪ ಹಾಗೂ ಭಕ್ತರ ಚಿತ್ರವನ್ನು ದ್ವಾರಬಂಧದ ಮೇಲೆ ಕೆತ್ತಲಾಗಿದೆ. ಅರ್ಧಮಂಟಪದ ಮೇಲ್ಭಾಗದಲ್ಲಿ (ಭಾವಣಿಯಲ್ಲಿ) ಕೊಳಲು, ಡಮರುಗ, ಮೃದಂಗ ಮೊದಲಾದ ವಾದ್ಯಗಳೊಡನೆ ನೃತ್ಯ ಮಾಡುತ್ತಿರುವ ನರ್ತಕಿಯರನ್ನು ಕೆತ್ತಲಾಗಿದೆ. ಗರ್ಭಗೃಹಗಳ ಬಾಗಿಲವಾಡದ ಮೇಲೆ ದ್ವಾರಪಾಲಕರನ್ನು ಕೆತ್ತಲಾಗಿದೆ. ಇನ್ನೊಂದು ಗರ್ಭಗೃಹದಲ್ಲಿ ಸಾಲಾಂಕೃತ ಕೀರ್ತಿನಾರಾಯಣ ಶಿಲ್ಪವಿದೆ. ಸಮಭಂಗಿಯಲ್ಲಿರುವ ಈ ವಿಗ್ರಹವು ಪೀಠ ಹಾಗೂ ಪ್ರಭಾವಳಿಗಳನ್ನೊಳಗೊಂಡಿದ್ದು, ಸುಮಾರು ಎರಡು ಮೀಟರ್ ಎತ್ತರವಿದೆ. ಪ್ರಭಾವಳಿಯ ಮೇಲೆ ವಿಷ್ಣುವಿನ ದಶಾವತಾರ ಚಿತ್ರಗಳನ್ನು ಬಿಡಿಸಲಾಗಿದೆ. ಗರ್ಭಗೃಹದೊಳಗಡೆ ಲಕ್ಷ್ಮೀ, ರಾಮಾನುಜ, ನಮ್ಮಾಳ್ವಾರ್ ಹಾಗೂ ವೆಂಕಟರಮಣನ ಮೂರ್ತಿಗಳನ್ನು ಇಡಲಾಗಿದೆ. ಅರ್ಧಮಂಟಪದಲ್ಲಿ ಪೂರ್ವಕ್ಕೆ ಮುಖಮಾಡಿಕೊಂಡಿರುವ ವಿಷ್ಣುವಿನ ವಿಗ್ರಹದ ಹಿಂಬದಿಯ ಭಿತ್ತಿಯ ಎರಡೂ ಕಡೆಯಲ್ಲಿಯೂ ಸುಂದರವಾದ ಜಾಲಾಂದ್ರಗಳಿವೆ.

ಶಿವನಿರುವ ಗರ್ಭಗೃಹದ ಶಿಖರಕ್ಕೆ ಸ್ತೂಮಿಯಿದ್ದು ಕೀರ್ತಿ ನಾರಾಯಣನಿರುವ ಗರ್ಭಗೃಹದ ಶಿಖರವನ್ನು ಇಟ್ಟಿಗೆ ಮತ್ತು ಗಾರೆಗಳಿಂದ ಕಟ್ಟಿದ್ದು ನವೀಕರಿಸಲಾಗಿದೆ. ಗಣಪತಿ, ವಿಷ್ಣು, ವೀರಭದ್ರ, ಸೂರ್ಯ ವಿಗ್ರಹಗಳು ನವರಂಗದಲ್ಲಿವೆ. ಸ್ಥಾನಕ ಭಂಗಿಯ ವಿಷ್ಣುವಿಗ್ರಹವು ಒಂದು ಮೀಟರ್ ಎತ್ತರವಿದೆ. ಆರು ಕೈಗಳನ್ನುಳ್ಳ ಸ್ಥಾನಕ ವೀರಭದ್ರ ವಿಗ್ರಹವು ೧.೩೦ ಮೀಟರ್ ಎತ್ತರವಿದೆ. ಈ ಎಲ್ಲಾ ವಿಗ್ರಹಗಳು ಹೊಯ್ಸಳ ಶೈಲಿಯಲ್ಲಿವೆ. ಇಲ್ಲಿರುವ ಸುಮಾರು ೧೪ನೆಯ ಶತಮಾನಕ್ಕೆ ಸೇರಿದ ಶಾಸನದಿಂದ ತಿಮ್ಮಣ್ಣನಾಯಕನ ಮನೆಯ ಅಕ್ಕಸಾಲೆ ಮಾರತಮ್ಮನು, ಮಲ್ಲಿದೇವರು ಹಾಗೂ ಲಕ್ಷ್ಮಿನಾಥ ದೇವರ ಸೇವೆಗೆಂದೇ ಒಂದೊಂದು ಅಕ್ಕಸಾಲಿ ಕುಟುಂಬವನ್ನು ಬಿಟ್ಟ ಅಂಶವನ್ನು ತಿಳಿಸುತ್ತದೆ. ಗುಡಿಯ ಸಮೀಪದಲ್ಲೇ ಶಾಸನದಲ್ಲಿ ಉಕ್ತವಾಗಿರುವ ಕೆರೆ ಇದೆ.

**ಕಿತ್ತೂರು (೨,೬೫೭)** : ತಾಲೂಕು ಕೇಂದ್ರದಿಂದ ೨೬ ಕಿ.ಮಿ. ದಕ್ಷಿಣಕ್ಕೆ ಕಪಿಲಾ ನದಿಯ ದಡದಲ್ಲಿರುವ ಕಿತ್ತೂರು, ಪ್ರಾಚೀನ ಕಾಲದಲ್ಲಿ 'ಅನಂತಕೀರ್ತಿ ಮಹಾನಗರಪುರ', 'ರಾಜಾಸ್ಥಾನ' ಎಂಬ ವಿಶೇಷಣಗಳನ್ನೂ ಹೊಂದಿದ್ದು, ೧೨ ಗ್ರಾಮಗಳ ಆಡಳಿತ ಕೇಂದ್ರವಾಗಿದ್ದ ಅಂಶ ೧೦೮೯ರ ಕಿತ್ತೂರು ಶಾಸನದಿಂದ ವೇದ್ಯವಾಗುತ್ತದೆ. ಇದು ಹಿಂದೆ ಪುನ್ನಾಟದ ರಾಜಧಾನಿಯಾಗಿತ್ತೆಂಬ ಅಭಿಪ್ರಾಯವಿದೆಯಾದರೂ, ಅದು ನೆರೆಯ ಪಿರಿಯಾಪಟ್ಟಣ ತಾಲೂಕಿನ ಕಿತ್ತೂರೆಂಬ ಅಭಿಪ್ರಾಯವೂ ಇದೆ. ಪುನ್ನಾಡಿನ ರಾಜಕುಮಾರಿ ಜೇಷ್ಠದೇವಿಯ ಮಗ ದುರ್ವಿನೀತನ ಕಾಲದಲ್ಲಿ ಪುನ್ನಾಟ ರಾಜ್ಯವು ಗಂಗ ಸಾಮ್ರಾಜ್ಯಕ್ಕೆ ಸೇರಿತು. ಕಿತ್ತೂರಿನಲ್ಲಿ ಪುನ್ನಾಟದ ಅರಸರ ಕಾಲದ ಅವಶೇಷವಾಗಿ ರಾ(ವಿಯ)ಮೇಶ್ವರ ದೇವಾಲಯವಿದೆ. ಈ ಗುಡಿಗೆ ಮಟಕೆರೆ, ಕಿತ್ತೂರು, ಜಯಪುರ, ಹೊಸಹೊಳಲು ಹಾಗೂ ಕಡಲ ಗ್ರಾಮಗಳ ಸಿದ್ಧಾಯವನ್ನು ದತ್ತಿಬಿಟ್ಟ ಅಂಶ ಕಿತ್ತೂರಿನ ೧೦೮೯ರ ಶಾಸನದಿಂದ ಗೊತ್ತಾಗುತ್ತದೆ. ಇದೇ ಗುಡಿಗೆ ಲಿಂಗರಾಜೆ ಅರಸು ೧೯ನೆಯ ಶತಮಾನದಲ್ಲಿ ದತ್ತಿ ಬಿಟ್ಟ ಅಂಶ ಅಲ್ಲಿರುವ ಇನ್ನೆರಡು ಶಾಸನಗಳಿಂದ ವೇದ್ಯವಾಗುತ್ತದೆ. ದೇವಾಲಯವು ಅನೇಕ ಸಲ ಜೀರ್ಣೋದ್ಧಾರವಾಗಿರುವುದರಿಂದ ಅದರ ಬಿಡಿಭಾಗಗಳು ಕಾಣೆಯಾಗಿದ್ದು, ಹೆಚ್ಚಿನ ವಿವರಗಳು ಸಿಗುತ್ತಿಲ್ಲ. ದೇವಸ್ಥಾನವು ಕಣಶಿಲೆಯಿಂದ ನಿರ್ಮಿತವಾಗಿದೆ. ದೇವಾಲಯದ ದಕ್ಷಿಣ ಹಾಗೂ ಪೂರ್ವದ ಕಡೆ ಪ್ರವೇಶದ್ವಾರಗಳಿವೆ. ಇಲ್ಲಿ ಗರ್ಭಗೃಹ, ಅಂತರಾಳ, ನವರಂಗಗಳಿದ್ದು ಇತ್ತೀಚೆಗೆ ಮುಖಮಂಟಪವನ್ನು ನಿರ್ಮಿಸಲಾಗಿದೆ. ದಕ್ಷಿಣದ್ವಾರದಲ್ಲಿ ಶೈವ ದ್ವಾರಪಾಲಕರಿದ್ದಾರೆ. ಸಿಂಹ ಹಾಗೂ ಆನೆಯ ಪೀಠಕಂಬಗಳು ಇಲ್ಲಿವೆ. ನಂದಿಶಿಲ್ಪವು ಸಹಜ ಭಂಗಿಯಲ್ಲಿದೆ. ನಾಡಿನ ಜೈನ ಶಾಸನಗಳಲ್ಲಿ ಕಿತ್ತೂರು ಸಂಘದ ಉಲ್ಲೇಖವಿರುವುದು ತಿಳಿದು ಬರುತ್ತದೆ. ಕಿತ್ತೂರಿನ ಬಸದಿ ಹಾಗೂ ದೇವಸ್ಥಾನಗಳಲ್ಲಿರುವ ಏಳು ಶಾಸನಗಳಲ್ಲಿ ವಿಜಯ ಪಾರ್ಶ್ವನಾಥ ಪೀಠದ ಮೇಲಿರುವ ೧೨ನೆಯ ಶತಮಾನದ ಶಾಸನ, ಮೂಲ ಸಂಘ, ಕಾನೂರ್ಗಣ, ಕುಂದಕುಂದಾನ್ವಯಕ್ಕೆ ಸೇರಿದ ಯತಿಗಳು ವಿಜಯನಾಥನನ್ನು ಪ್ರತಿಷ್ಠಾಪಿಸಿದ್ದನ್ನು ದಾಖಲಿಸಿದರೆ, ಇತರ ನಾಲ್ಕು ಜೈನ ಶಾಸನಗಳು ೧೯ನೆಯ ಶತಮಾನಕ್ಕೆ ಸೇರಿದ ದತ್ತಿಗಳಾಗಿವೆ. ಬಸದಿ ದೇವಸ್ಥಾನದ ೧೬೭೨ರ ಶಾಸನ, ಕಂಠೀರವ ನರಸರಾಜರ ದತ್ತಿಯನ್ನು ಉಲ್ಲೇಖಿಸಿದರೆ,

೧೯ನೆಯ ಶತಮಾನದ ಇನ್ನೊಂದು ಶಾಸನದಲ್ಲಿ ಮೇದಹಳ್ಳಿಯ ಮಠವೊಂದರ ಉಲ್ಲೇಖವಿದೆ. ಆದರೆ ಬಸದಿಗಳಿಂದು ಶಿಥಿಲಾವಸ್ಥೆಯಲ್ಲಿವೆ. ಊರಿನ ಉತ್ತರಕ್ಕೆ ಇರುವ ಮಣ್ಣಿನ ಕೋಟೆಯೊಳಗೆ ಪ್ರಾಚೀನ ಅವಶೇಷಗಳು ಕಂಡು ಬರುತ್ತವೆ.

**ಕೆ.ಬೆಳ್ತೂರು (೨,೩೦೮) :** ಕಪಿಲಾ ನದಿ ದಡದ ಮೇಲಿರುವ ಕೆ.ಬೆಳ್ತೂರು ಹೆಗ್ಗಡದೇವನ ಕೋಟೆಗೆ ೧೫ಕಿ.ಮೀ. ದೂರದಲ್ಲಿದೆ. ಇಲ್ಲಿಂದ ಈವರೆಗೆ ೧೨ ಶಾಸನಗಳು ವರದಿಯಾಗಿದ್ದು, ಕ್ರಿ.ಶ. ೧೦೨೨ರ ಕನ್ನಡ ದಾಖಲೆಯಲ್ಲೂ ಈ ಊರನ್ನು 'ಬೆಳತೂರು' ಎಂದೇ ಕರೆದಿರುವುದು ಕಂಡುಬರುತ್ತದೆ. ಒಂದನೇ ರಾಜೇಂದ್ರ ಚೋಳನ ಕಾಲದಲ್ಲಿ (೧೦೨೦) ಶಿಥಿಲವಾಗಿದ್ದ ಬಾಣೇಶ್ವರ ಗುಡಿಯನ್ನು ಬಸವಯ್ಯನು ಜೀರ್ಣೋದ್ಧಾರ ಮಾಡಿಸಿದ ಸಂದರ್ಭದಲ್ಲಿ ಬಸವಶೆಟ್ಟಿಯು ದೇವರ ನಂದಾದೀವಿಗೆಗೆಂದು ಭೂಮಿಯನ್ನು ಕೊಂಡು ದಾನ ಬಿಟ್ಟಿದ್ದನ್ನು ಇದು ದಾಖಲಿಸಿದೆ. ಲಕ್ಷ್ಮೀನರಸಿಂಹ, ಬಾಣೇಶ್ವರ, ಮಲ್ಲೇದೇವರು, ಬಸವಣ್ಣ, ಮಾರಮ್ಮ ಮುಂತಾದ ದೇವಾಲಯಗಳು ಇಲ್ಲಿವೆ. ನವೀಕೃತ ಶಿಖರದಿಂದ ಕೂಡಿದ ಲಕ್ಷ್ಮೀನರಸಿಂಹ ದೇವಾಲಯವು ಗರ್ಭಗೃಹವನ್ನು ಹೊಂದಿದ್ದು, ಊರಿನ ಮಧ್ಯಭಾಗದಲ್ಲಿದೆ. ವಿಶಾಲವಾದ ನವರಂಗಕ್ಕೆ ಅರ್ಧಮಂಟಪವಿದೆ. ಕೈಯಲ್ಲಿ ಬಳ್ಳಿಯನ್ನಿಡಿದುಕೊಂಡು ನೃತ್ಯ ಭಂಗಿಯಲ್ಲಿರುವ ಇಬ್ಬರು ನರ್ತಕಿಯರ ವಿಗ್ರಹಗಳು ನವರಂಗದ ಮುಖ್ಯದ್ವಾರದ ಎರಡೂ ಕಡೆಯಲ್ಲೂ ಇವೆ. ಅರ್ಧಮಂಟಪ ದ್ವಾರದ ಎರಡು ಕಡೆ ದ್ವಾರಪಾಲಕರ ವಿಗ್ರಹಗಳಿವೆ. ನಾಗಬಂಧ ಮತ್ತು ಶೃಂಗಾರ ಶಿಲ್ಪಗಳನ್ನು ಬಿಟ್ಟರೆ ಗೋಡೆಗಳಲ್ಲಿ ಇನ್ನಾವ ಚಿತ್ರಗಳೂ ಇಲ್ಲದೆ ಸಾದಾ ರೀತಿಯಲ್ಲಿದೆ. ಮೈಸೂರು ಶೈಲಿಯ ಪ್ರಭಾವಳಿಯನ್ನೊಳಗೊಂಡ, ೧.೩೦ ಮೀ. ಎತ್ತರವಿರುವ ಲಕ್ಷ್ಮೀ ನರಸಿಂಹನ ವಿಗ್ರಹ ಗರ್ಭಗುಡಿಯಲ್ಲಿದೆ. ಅರ್ಧಮಂಟಪದೊಳಗಡೆ ರಾಮಾನುಜ ಮತ್ತು ನಮ್ಮಾಳ್ವಾರು ವಿಗ್ರಹಗಳಿವೆ. ಸುಂದರವಾದ ಲಕ್ಷ್ಮೀನರಸಿಂಹನ ಒಂದು ಅಡಿ ಎತ್ತರದ ಕಂಚಿನ ವಿಗ್ರಹ ಕೂಡ ಅರ್ಧಮಂಟಪದಲ್ಲಿದೆ. ನವರಂಗದ ಕಂಬಗಳಲ್ಲಿ ನೃತ್ಯಭಂಗಿಯಲ್ಲಿರುವ ಕೃಷ್ಣ, ಹೂ ಬಳ್ಳಿ ಚಿತ್ರ ಹಾಗೂ ಆಂಜನೇಯನ ಮೂರ್ತಿಗಳನ್ನು ಕೆತ್ತಲಾಗಿದೆ. ವಿಜಯನಗರ ಶೈಲಿಯಲ್ಲಿ ನವರಂಗ ಹಾಗೂ ಮುಖಮಂಟಪಗಳನ್ನು ನಂತರದಲ್ಲಿ ಕಟ್ಟಲಾಗಿದೆ. ಸುಮಾರು ೧೨ನೇ ಶತಮಾನದಲ್ಲಿದ್ದ ಪೆರ್ಮಾಡಿ ಗಾವುಂಡನ ಹೋರಾಟಕ್ಕೆ ಸಂಬಂಧಿಸಿದ ತ್ರುಟಿತ ಶಾಸನವೊಂದು ಗುಡಿ ಪ್ರಾಕಾರದ ಒಳಗಡೆ ಇದೆ. ದೇವಸ್ಥಾನದ ನವರಂಗದ ವಾಯವ್ಯ ಮೂಲೆಯಲ್ಲಿ ಪದ್ಮಾಸೀನ ಲಕ್ಷ್ಮೀಯ ವಿಗ್ರಹವನ್ನು ಸ್ಥಾಪಿಸಲಾಗಿದೆ. ದೇವಸ್ಥಾನದ ಹೊರ ಭಾಗದಲ್ಲಿ ಮೂರು ವೀರಗಲ್ಲುಗಳಿವೆ. ಬಾಣೇಶ್ವರ ದೇವಾಲಯವು ಶಿಥಿಲಾವಸ್ಥೆಯಲ್ಲಿದ್ದು, ಹೊರಮಂಟಪದಲ್ಲಿ ಹರಿಹರ, ವಿಷ್ಣು, ನಂದಿ ಹಾಗೂ ಶಿವಲಿಂಗಗಳಿವೆ. ಇಲ್ಲಿರುವ ವಿಷ್ಣು ವಿಗ್ರಹವು ಹೊಯ್ಸಳ ಶೈಲಿಯಲ್ಲಿದೆ. ಚೋಳರ ಕಾಲದ ಭೈರವ ಮತ್ತು ಸಪ್ತಮಾತೃಕಾ ವಿಗ್ರಹಗಳು ಇಲ್ಲಿವೆ. ದೇವಸ್ಥಾನದ ಆವರಣದಲ್ಲಿ ಐದು ಶಿಲಾಶಾಸನ (೧೦೨೦, ೧೦೩೩, ೧೦೫೭, ೧೭೯೦ ಹಾಗೂ ೧೭೯೩)ಗಳಿವೆ. ಎರಡನೆಯದು ಇಮ್ಮಡಿ ರಾಜೇಂದ್ರ ಚೋಳನ ಕಾಲದಾಗಿದ್ದು ವಿವರ ಹಾಳಾಗಿದ್ದರೆ, ಮೂರನೆಯದು ದೇಕಬ್ಬೆಯ ಅಗ್ನಿಪ್ರವೇಶವನ್ನು ದಾಖಲಿಸಿರುವ ಮಾಸ್ತಿಕಲ್ಲಾಗಿದ್ದು,

ಉಲ್ಲೇಖಾರ್ಹವಾಗಿದೆ. ನಾಲ್ಕು ಹಂತದಲ್ಲಿರುವ ಈ ಮಾಸ್ತಿ ಶಿಲ್ಪ, ಕೆಳಹಂತದಲ್ಲಿ ಮಹಾಸತಿ ದೇಕಬ್ಬೆಯು ಮೆರವಣಿಗೆಯಲ್ಲಿ ಸಾಗುತ್ತಿದ್ದು, ಎರಡನೆಯ ಹಂತದಲ್ಲಿ ದೇಕಬ್ಬೆಯು ಅಗ್ನಿಪ್ರವೇಶಕ್ಕೆಂದು ಚಿತೆಯ ಮುಂದಿನ ವೇದಿಕೆಯ ಮೇಲೆ ನಿಂತಿದ್ದು, ಮೂರನೆಯ ಹಂತದಲ್ಲಿ ವಿಮಾನದಲ್ಲಿ ಅವಳನ್ನು ಸುರಲೋಕಕ್ಕೆ ಅಪ್ಸರೆಯರು ಕರೆದೊಯ್ಯುತ್ತಿದ್ದು, ಮೇಲಿನ ಹಂತದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರರ ಸಾನಿಧ್ಯವನ್ನು ದೇಕಬ್ಬೆ ಹೊಂದಿದ ದೃಶ್ಯವನ್ನು ಬಹಳ ಮನೋಜ್ಞವಾಗಿ ಕೆತ್ತಲಾಗಿದೆ. ಅಲ್ಲೇ ದೇವವಾಹನಗಳಾದ ಹಂಸ, ನಂದಿ ಹಾಗೂ ಮೂಷಿಕಗಳನ್ನು ಕಾಣಬಹುದಾಗಿದೆ. ಮುಮ್ಮಡಿ ನರಸಿಂಹನ ಆಳ್ವಿಕೆಗೆ ಸೇರಿದ ಇನ್ನೊಂದು ಶಾಸನದಿಂದ ನುಗುನಾಡ ಪ್ರಭುಗಳು ಬಾಣೇಶ್ವರ ಗುಡಿಯನ್ನು ವಿಸ್ತರಿಸಿ, ಅದರ ದುರಸ್ತಿಗೆಂದು ದತ್ತಿ ಬಿಟ್ಟ ಅಂಶವನ್ನು ದಾಖಲಿಸಿದೆ. ನಿರ್ಲಕ್ಷ್ಯಕ್ಕೆ ಒಳಗಾಗಿರುವ ಮಲ್ಲೇಶ್ವರ (ಮಲ್ಲೇದೇವರು) ದೇವಾಲಯ ಪಾಳುಬಿದ್ದಿದೆ. ಇಲ್ಲಿಯ ೧೨೫೫ರ ಎರಡು ಶಾಸನಗಳು ಹೊಯ್ಸಳ ಸೋಮೇಶ್ವರನ ಆಡಳಿತಾವಧಿಯಲ್ಲಿ ಬೆಳತೂರ ಮಲ್ಲಿಕಾರ್ಜುನ ಮತ್ತು ಬಾಣೇಶ್ವರ ದೇವಾಲಯಗಳಿಗೆ ದತ್ತಿ ಬಿಟ್ಟ ವಿಚಾರವನ್ನು ತಿಳಿಸುತ್ತವೆ. ಪ್ರಸಿದ್ಧವಾದ ಆದರೆ ಭಗ್ನಗೊಂಡಿರುವ ೧೦೩೭ರ ದೇಕಬ್ಬೆ ಶಾಸನದಿಂದಾಗಿಯೂ ಈ ಊರು ಪ್ರಸಿದ್ಧವಾಗಿದೆ. ಬೆಳತೂರಿನ ಲಕ್ಷ್ಮೀನರಸಿಂಹನ ಗುಡಿ ಬಳಿ ಇರುವ ನಾಲ್ಕು ಶಾಸನಗಳಲ್ಲಿ ಎರಡು ಶಾಸನಗಳು ಸೋಸಲೆಯ ವೆಂಕಮ್ಮ ಮತ್ತು ಶೇಷಾದ್ರಿ ಅಯ್ಯಂಗಾರರ ದಾನಗಳನ್ನು ದಾಖಲಿಸಿವೆ.

**ಕೊಳಗಾಲ :** ಹೆಗ್ಗಡದೇವನಕೋಟೆಗೆ ೨೦ ಕಿ.ಮೀ. ದೂರದಲ್ಲಿರುವ ಇಲ್ಲಿಂದ ವರದಿಯಾಗಿರುವ ಶಾಸನಗಳಲ್ಲಿ ಮಾರಿಗುಡಿ ಮುಂದಿರುವ ೧೦೫೩ರ ಶಾಸನ ರಾಜಾಧಿರಾಜಚೋಳನ ಆಳ್ವಿಕೆಯ ಎಂಟನೆಯ ವರ್ಷದಲ್ಲಿ, ನವಲೆನಾಡ ಕೋಳಿಗಾಲದ ಉತ್ತಮಚೋಳಗಾವುಂಡನು ಗಂಗಾಧರೇಶ್ವರನನ್ನು ಪ್ರತಿಷ್ಠಾಪಿಸಿ, ಊರ ಉತ್ಪನ್ನದಲ್ಲಿ ಮೂನ್ನೂರು ಪುಟ್ಟಿ ದವಸ ಹಾಗೂ ತವುದಹಳ್ಳಿಯ ಗದ್ದೆ ಹಾಗೂ ಗಾಣದೆಣ್ಣೆಯನ್ನು ದತ್ತಿ ಬಿಟ್ಟಿದ್ದನ್ನು ತಿಳಿಸುತ್ತದೆ. ಅಲ್ಲೇ ಇರುವ ಇನ್ನೊಂದು ಸ್ಮಾರಕ ಶಾಸನ ಇಮ್ಮಡಿ ರಾಜೇಂದ್ರ ಚೋಳನ ಆಳ್ವಿಕೆಯಲ್ಲಿ ಕೆರೆಯೂರು ಕೋಳಿಗಾಲ ಗ್ರಾಮಗಳ ನಡುವಣ ಕಚ್ಚಾಟಕೆ ಸಂಬಂಧಿಸಿದಂತೆ ರಾಚಗೌಡ ನಿಲ್ಲಿಸಿದ ವೀರಗಲ್ಲಾಗಿದ್ದು, ವೀರಗಲ್ಲನ್ನು ಕೆತ್ತಿದ ಶಿಲ್ಪಿ ಕೇತಾಚಾರಿಗೆ ಭೂದಾನ ನೀಡಿದ್ದನ್ನು ಹೇಳುತ್ತಾ 'ವೀರವಣಂ' ಎಂದೂ ಉಲ್ಲೇಖಿಸಿರುವುದು ಕುತೂಹಲಕಾರಿಯಾಗಿದೆ.

**ನರಸೀಪುರ (೫೨೧೫) :** ತಾಲೂಕು ಕೇಂದ್ರ ಹೆಗ್ಗಡದೇವನಕೋಟೆಯಿಂದ ೧೬ ಕಿ.ಮೀ. ಹಾಗೂ ಸಂತೆಸರಗೂರಿನಿಂದ ನಾಲ್ಕು ಕಿ.ಮೀ. ದೂರದಲ್ಲಿ ಕಪಿಲ ತೀರದ ಮೇಲಿರುವ ಚಾರಿತ್ರಿಕ ಮಹತ್ವದ ಸ್ಥಳ. ಇಲ್ಲಿಂದ ಈವರೆಗೆ ವರದಿಯಾಗಿರುವ ಮೂರು ಶಾಸನಗಳಲ್ಲಿ ೧೧೩೭ರ ವೀರಗಲ್ಲು ಶಾಸನ, ಹೆಗ್ಗವಾಡಿಯ ಬೀಚಣ್ಣನು ಕಳ್ಳರೊಂದಿಗೆ ಹೋರಾಡುತ್ತ ಮಡಿದಾಗ ಅವನಿಗೆ ನಿಲ್ಲಿಸಿದ ವೀರಗಲ್ಲೆಂದು ಹೇಳಿದರೆ,

ಶಾಸನಗುಡಿಯಲ್ಲಿರುವ ೧೬೫೩ರ ಶಾಸನ, ಹುರದ ಪ್ರಭು ಮಾಧವ ನಾಯಕನ ಮಗ, ದಳವಾಯಿ ಲಿಂಗರಾಜಯ್ಯನು ನಾರಸಿಂಹನ ಸೇವೆಗೆಂದು ನರಸೀಪುರ ಗ್ರಾಮವನ್ನು ದತ್ತಿ ನೀಡಿದ್ದನ್ನು ದಾಖಲಿಸಿದೆ. ಇಲ್ಲಿರುವ ಶಾಸನಗುಡಿಯು ನರಸಿಂಹನ ದೇವಾಲಯವಾಗಿದ್ದು, ಅಲ್ಲಿ ಶಾಸನಕಲ್ಲುಗಳಿರುವುದರಿಂದ ಶಾಸನಗುಡಿ ಎಂಬ ಹೆಸರು ಬಂದಿದೆ. ಇಲ್ಲಿರುವ ೧೬೫೫ರ ಶಾಸನ ನರಸಿಂಹ ದೇವಾಲಯಕ್ಕೆ ಕಂಠೀರವ ನರಸರಾಜ ಒಡೆಯರು ಭೂದಾನ ನೀಡಿದ್ದನ್ನು ದಾಖಲಿಸಿದ್ದು, ಶಾಸನೋಕ್ತ ನರಸಿಂಹ ದೇವಾಲಯವೇ ಇದಾಗಿದೆ. ಗರ್ಭಗೃಹ, ಮುಖಮಂಟಪಗಳನ್ನುಳ್ಳ ಈ ಗುಡಿಗೆ ಜಯ–ವಿಜಯ ದ್ವಾರಪಾಲಕ ಶಿಲ್ಪಗಳಿದ್ದು, ಗರ್ಭಗುಡಿಯಲ್ಲಿ ನರಸಿಂಹ ಬಿಂಬವಿದೆ. ಸಮೀಪದ ಕೆರೆಯ ದಂಡೆಯ ಮೇಲೆ ೧೧೩೭ರ ವೀರಗಲ್ಲು ಶಾಸನವಿದ್ದು, ಊರಲ್ಲಿ ಮಾರಮ್ಮನ ಗುಡಿ ಹಾಗೂ ರಾಮಮಂದಿರಗಳಿವೆ. ಅಲ್ಲದೆ ೧೮೨೯ರ ಇನ್ನೊಂದು ಶಾಸನ ಆನೆಯನ್ನು ಅಪ್ಪಣೆ ಮೇರೆಗೆ ಗುಂಡಾಕಿ ಸಾಯಿಸಿ ಒಪ್ಪಿಸಿದ ದೇವಚಂದ್ರನಿಗೆ ಬಿಟ್ಟ ಉಂಬಳಿಯನ್ನು ತಿಳಿಸುತ್ತದೆ.

**ಮಟಕೆರೆ (೭೯೭) :** ಕಬಿನಿ–ತಾರಕಾ ನದಿಗಳ ಸಂಗಮಸ್ಥಳದಲ್ಲಿರುವ ಇದು ತಾಲೂಕು ಕೇಂದ್ರದಿಂದ ೧೦ ಕಿ.ಮೀ. ದೂರದಲ್ಲಿದೆ. ಇಲ್ಲಿರುವ ಚೋಳ ಒಂದನೆಯ ಕುಲೋತ್ತುಂಗನ ತಮಿಳು ಶಾಸನದಲ್ಲಿ ಅವನ ರಾಣಿಯ ಹೆಸರು ದಾಖಲಾಗಿದ್ದು, ಸುಮಾರು ೧೨–೧೩ನೇ ಶತಮಾನಕ್ಕೆ ಸೇರಿದ ಶಾಸನದಲ್ಲಿ ರಾಮೇಶ್ವರ ದೇವರಿಗೆ ಬಿಮ್ಮಯ್ಯನು ಆರು ಸಾವಿರ ಗುಳಿ ಭೂಮಿಯನ್ನು ಪಂಡಿತಕೆರೆಯಲ್ಲಿ ಬಿಟ್ಟಿದನ್ನು ದಾಖಲಿಸಿದೆ. ಇಲ್ಲಿನ ಎಂಟನೆಯ ಶತಮಾನದ ರಾಷ್ಟ್ರಕೂಟ ಧಾರವರ್ಷ ಶ್ರೀವಲ್ಲಭನ ಶಾಸನವೊಂದರಲ್ಲಿ ಕಂಬರಸನು ೯೬,೦೦೦ವನ್ನೂ, ಆದಿಯಮರಸ ತೊರೆನಾಡು–೩೦೦ ಅನ್ನು ಆಳುತ್ತಿದ್ದಾಗ ದಮಟಗಟ್ಟೆಯ ಪೆರ್ಗಡೆಯು ಕೊಡಗೂರನ್ನು ದತ್ತಿ ಬಿಟ್ಟ ಉಲ್ಲೇಖವಿದೆ. ಆದರೆ ೧೫೮೧ರ ಶಾಸನದಲ್ಲಿ ಇದು ಮತಕೆರೆ ಎಂದೇ ದಾಖಲಿಸಲ್ಪಟ್ಟಿದೆ. ಊರ ಪೂರ್ವಕ್ಕೆ ಸಂಗಮ ಸ್ಥಳದಲ್ಲಿ ರಾಮಲಿಂಗೇಶ್ವರನ ಬೃಹತ್ ಆಲಯವಿದೆ. ಗರ್ಭಗೃಹ, ಅಂತರಾಳ, ನವರಂಗಗಳನ್ನುಳ್ಳ ಈ ಗುಡಿಗೆ ಪೂರ್ವ–ದಕ್ಷಿಣಗಳಲ್ಲಿ ದ್ವಾರವಿದ್ದು, ದಕ್ಷಿಣ ದ್ವಾರಕ್ಕೆ ಮಕರತೋರಣ ಅಲಂಕಾರವಿದ್ದು ದ್ವಾರಪಾಲಕರಿದ್ದಾರೆ. ನವರಂಗದಲ್ಲಿ ಗಣಪತಿಯ ನಾಲ್ಕು, ಹಾಗೂ ಭೈರವ, ಚಂಡಿಕೇಶ್ವರ, ಚಾಮುಂಡಿ, ಭೃಂಗಿ ವಿಷ್ಣು ಮುಂತಾದ ಪ್ರಾಚೀನ ಶಿಲ್ಪಗಳಿವೆ. ನವರಂಗದ ಸ್ತಂಭಗಳ ಮೇಲೆ ವಿವಿಧ ಉಬ್ಬುಶಿಲ್ಪಗಳಿವೆ. ಈ ಗುಡಿಯ ಬದಿಯಲ್ಲಿ ಪಾರ್ವತಿಯ ಆಲಯವಿದೆ. ಇವುಗಳನ್ನು ಬಳಸಿರುವ ಪ್ರಾಕಾರದಲ್ಲಿ ಹಿಂಭಾಗಕ್ಕಾದಂತೆ ಇರುವ ಕಿರುಗುಡಿಗಳಲ್ಲಿ ಪಂಚಲಿಂಗಗಳಿವೆ. ಸುಮಾರು ೧೬ನೆಯ ಶತಮಾನಕ್ಕೆ ಸೇರಿದ ಶಾಸನವೊಂದು ಮಟಕೆರೆಯ ರಾಮದೇವರಿಗೆ ತಾವರೆಗೆರೆ ಗ್ರಾಮವನ್ನು ಮಲಿಗಾನಹಳ್ಳಿಯ ಶಿವನಪ್ಪಶೆಟ್ಟಿಯು ದತ್ತಿಬಿಟ್ಟಿದ್ದನ್ನು ದಾಖಲಿಸಿದ್ದು, ೧೫೮೧ರ ಇನ್ನೊಂದು ಶಾಸನ ಇದೇ ದೇವರಿಗೆ ಬಿಟ್ಟ ದತ್ತಿಯನ್ನು ಉಲ್ಲೇಖಿಸುತ್ತದೆ. ರಾಮಲಿಂಗೇಶ್ವರ ದೇವರ ಜಾತ್ರೆಯನ್ನು ಶಿವರಾತ್ರಿ ಸಮಯದಲ್ಲಿ

ಎರಡು ದಿನಗಳ ಕಾಲ ವಿಜಂಭೃಣೆಯಿಂದ ಆಚರಿಸಲಾಗುತ್ತಿದೆ. ಉಳಿದಂತೆ ಊರಲ್ಲಿ ಬಸವೇಶ್ವರ, ಮಾರಮ್ಮ ಮುಂತಾದ ನವೀನ ಗುಡಿಗಳಿದ್ದು, ಮಸೀದಿ ಕೂಡ ಇದೆ.

**ಮಾದಾಪುರ (೨,೯೫೩) :** ಇದು ಹೆಗ್ಗಡದೇವನಕೋಟೆಯಿಂದ ಪೂರ್ವಕ್ಕೆ ೧೧ ಕಿ.ಮೀ. ದೂರದಲ್ಲಿದೆ. ಇಲ್ಲಿನ ಬೆಟ್ಟದಮೇಲೆ ಗಂಗರ ಕಾಲದ ಚಂದ್ರಮೌಳೇಶ್ವರ ದೇವಸ್ಥಾನವಿದೆ. ಚಿಕ್ಕಗರ್ಭಗೃಹ ಹಾಗೂ ಅರ್ಧಮಂಟಪಗಳನ್ನುಳ್ಳ ಇದಕ್ಕೆ ನಂತರದಲ್ಲಿ ತೆರೆದ ಮುಖಮಂಟಪವನ್ನು ಸೇರಿಸಲಾಗಿದೆ. ಈ ದೇವಸ್ಥಾನದ ಸಮೀಪದಲ್ಲಿಯೇ ಮಾರಮ್ಮ ಮತ್ತು ಆಂಜನೇಯ ದೇವಸ್ಥಾನಗಳಿವೆ. ವಿಜಯನಗರ ಶೈಲಿಯ ಆಂಜನೇಯನ ದೇವಸ್ಥಾನವು ಬೃಹತ್ತಾಗಿದ್ದು, ಈಚೆಗೆ ನವೀಕರಿಸಲಾಗಿದೆ. ದೇವಸ್ಥಾನದ ಮುಂದಿನ ಮರದ ಬಾಗಿಲುಗಳು, ಸುಂದರವಾದ ಹರನ ಗಾರೆಯ ವಿಗ್ರಹಗಳು ಮೈಸೂರು ಒಡೆಯರ ಕೊಡುಗೆ. ಮುಖಮಂಟಪದ ಕಂಬಗಳಲ್ಲಿ ಭೃಂಗಿ, ಶೃಂಗಿ, ಭೈರವ ಹಾಗೂ ಗಣೇಶನ ಸುಂದರ ವಿಗ್ರಹಗಳಿವೆ. ವಿಶಾಲವಾದ ಈ ಗುಡಿಯ ಪ್ರಾಕಾರದಲ್ಲಿ ವಿವಾಹಗಳನ್ನು ನಡೆಸಲಾಗುತ್ತದೆ. ಆಂಜನೇಯನ ಗುಡಿಗೆ ಸಮೀಪದ ಮೇಟಿಕಲ್ಲು ಗವಿಯಲ್ಲಿ ಆಂಜನೇಯ ಮತ್ತು ಮಹಾದೇಶ್ವರ ಗುಡಿಗಳಿದ್ದರೆ ವೀಣಾಜಮ್ಮನ ಗುಡ್ಡದಲ್ಲಿ ದೇವೀಗುಡಿ ಇದೆ.

**ಮುಳ್ಳೂರು (೩,೩೫೩) :** ತಾಲೂಕು ಕೇಂದ್ರ ಹೆಗ್ಗಡದೇವನಕೋಟೆಯಿಂದ ೨೪ ಕಿ.ಮೀ. ದೂರದಲ್ಲಿರುವ ಇದು ಹೊಯ್ಸಳರ ಕಾಲದ ಲಕ್ಷ್ಮೀಕಾಂತಸ್ವಾಮಿ ಗುಡಿಯಿಂದಾಗಿ ಪ್ರಸಿದ್ಧವಾಗಿದೆ. ಮೂಲತಃ ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದ ಇದು, ಮೈಸೂರರಸರ ಕಾಲದಲ್ಲಿ ದುರಸ್ತಿಗೊಂಡಿದ್ದು, ಮುಂದೆ ವಿಶಾಲವಾದ ಮುಖಮಂಟಪವಿದೆ. ಈ ಗುಡಿಯ ಮುಂದಿರುವ ದೀಪಸ್ತಂಭವನ್ನು ೧೬೭೫ರಲ್ಲಿ ಚಾಮರಾಜ ಒಡೆಯರು ನಿಲ್ಲಿಸಿದ ಅಂಶ ಅದರ ಮೇಲಿರುವ ಶಾಸನದಿಂದ ಗೊತ್ತಾಗುತ್ತದೆ. ಗರ್ಭಗೃಹದಲ್ಲಿರುವ ಒಂದು ಮೀಟರ್ ಎತ್ತರದ ಲಕ್ಷ್ಮೀನಾರಾಯಣನ ವಿಗ್ರಹವು ಹೊಯ್ಸಳ ಶೈಲಿಯ ಸುಂದರ ಶಿಲ್ಪವಾಗಿದೆ. ನವರಂಗದ ದೇವಕೋಷ್ಟವೊಂದರಲ್ಲಿ ರಾಮಾನುಜರ ಶಿಲ್ಪವಿದ್ದು, ಗರ್ಭಗೃಹ ಹಾಗೂ ನವರಂಗದ ಛಾವಣಿಗಳು ಕಮಲಾಲಂಕೃತವಾಗಿದ್ದು, ಆಕರ್ಷಕವಾಗಿವೆ. ಗರ್ಭಗೃಹದ ಮೇಲಿರುವ ಶಿಖರವು ವಿಜಯನಗರ ಕಾಲದ್ದಾಗಿದೆ. ಬಹುಕೋನಾಕಾರದ ತಳವಿನ್ಯಾಸವನ್ನು ಹೊಂದಿರುವ ಗರ್ಭಗೃಹದ ಭಿತ್ತಿಯನ್ನು ದೇವಾನುದೇವತಾ ಶಿಲ್ಪಗಳಿಂದ ಅಲಂಕರಿಸಲಾಗಿದೆ. ವಿಜಯನಗರಕಾಲದ ಅರ್ಕೇಶ್ವರ, ಅಮೃತೇಶ್ವರ ದೇವಾಲಯಗಳು ಇಲ್ಲಿದ್ದು, ಬಸವೇಶ್ವರ, ಆಂಜನೇಯ, ಗಣಪತಿ ಹಾಗೂ ಕಾಳಮ್ಮನ ದೇವಾಲಯಗಳಿವೆ. ಯುಗಾದಿ ಸಮಯದಲ್ಲಿ ಕಾಳಮ್ಮನ ಜಾತ್ರೆಯು ೧೫ ದಿನಗಳ ಕಾಲ ಜರುಗುತ್ತದೆ.

**ರಾಜೀವ್ ಗಾಂಧೀ ರಾಷ್ಟ್ರೀಯ ಉದ್ಯಾನ :** ರಾಷ್ಟ್ರದ ಪ್ರಸಿದ್ಧ ಸಂರಕ್ಷಿತ ವನ್ಯಧಾಮಗಳಲ್ಲಿ ಒಂದು, ೧೯೫೫ರ ಅಧಿಸೂಚನೆಯಂತೆ ೨೮೫ ಚ.ಕಿ.ಮೀ. ವಿಸ್ತೀರ್ಣದೊಂದಿಗೆ ಪ್ರಾರಂಭವಾದ ನಾಗರಹೊಳೆ ರಾಷ್ಟ್ರೀಯ ಉದ್ಯಾನಕ್ಕೆ ೧೯೭೪ರಲ್ಲಿ ಮೈಸೂರು ಜಿಲ್ಲೆಯ

ಸಂರಕ್ಷಿತ ಅರಣ್ಯ ಭಾಗವನ್ನೂ ಸೇರಿಸಲಾಗಿದೆ. ಇದನ್ನು ೧೯೯೮ರಲ್ಲಿ ರಾಜೀವ್‌ಗಾಂಧೀ ಹೆಸರಲ್ಲಿ ರಾಷ್ಟ್ರೀಯ ಉದ್ಯಾನದ ಹಂತಕ್ಕೆ ಏರಿಸಲಾಗಿದ್ದು, ಅದರ ವಿಸ್ತೀರ್ಣ ೬೪೩.೩೪ ಚ.ಕಿ.ಮೀ.ನಷ್ಟು ಆಗಿದೆ. ಇದರಲ್ಲಿ ಮೈಸೂರು ಜಿಲ್ಲೆಯ ಅರಣ್ಯ ಪ್ರದೇಶದ ವಿಸ್ತೀರ್ಣ ೩೫೪.೯೫ ಚ.ಕಿ.ಮೀ. ಸೇರಿದೆ. ಈ ಉದ್ಯಾನವನ್ನು ಏಳು ವಲಯಗಳಾಗಿ ವಿಭಾಗಿಸಿದ್ದು, ಅವುಗಳಲ್ಲಿ ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ತಾಲೂಕಿನ ಅಂತರಸಂತೆ, ಮೇಟಿಕುಪ್ಪೆ, ದೊಡ್ಡಬೈರನಕುಪ್ಪೆ (ಡಿ.ಬಿ.ಕುಪ್ಪೆ); ಹುಣಸೂರು ತಾಲೂಕಿನ ವೀರನಹೊಸಹಳ್ಳಿ ವಲಯಗಳನ್ನು ಒಳಗೊಂಡಿದೆ. ಕಬಿನಿ ಜಲಾಶಯ ಮತ್ತು ಹಿನ್ನೀರಿನ ಪ್ರದೇಶ ಹೆಗ್ಗಡದೇವನಕೋಟೆ ತಾಲೂಕಿನಲ್ಲೇ ಇದೆ.

**ಸರಗೂರು (೯,೯೩೧)** : ತಾಲೂಕು ಕೇಂದ್ರ ಹೆಗ್ಗಡದೇವನಕೋಟೆಯಿಂದ ೧೨ ಕಿ.ಮೀ. ದೂರದಲ್ಲಿರುವ ಇದು ೧೮೬೪–೧೮೮೬ರ ಅವಧಿಯಲ್ಲಿ ತಾಲೂಕು ಕೇಂದ್ರವಾಗಿತ್ತಾದರೂ 'ಹೆಗ್ಗಡದೇವನಕೋಟೆ'ಯು ತಾಲೂಕು ಕೇಂದ್ರವಾದ (೧೮೮೬) ನಂತರ, ಹೋಬಳಿ ಕೇಂದ್ರವಾಗಿ ಉಳಿದು ಬಂದಿರುವ ಪ್ರಾಚೀನ ಸ್ಥಳವಾಗಿದೆ. ಇಲ್ಲಿ ವಾರದ ಸಂತೆಯಾಗುವುದರಿಂದ, 'ಸಂತೆ ಸರಗೂರು' ಎಂದೂ ಕರೆಯಲ್ಪಡುವ ಇದು ನೆರೆಯ ನರಸೀಪುರದ ೧೧೩೭ರ ಶಾಸನದಲ್ಲಿ 'ಸರಬಿಗೂರು' ಎಂದು ಉಲ್ಲೇಖಿತಗೊಂಡಿದ್ದರೂ 'ಸರಗೂರು' ರೂಪವೇ ಶಾಸನಗಳಲ್ಲಿ ಹೆಚ್ಚಾಗಿ ಕಾಣಸಿಗುತ್ತವೆ. ಹಿಂದೆ ಸೀಮೆ/ಸ್ಥಳವೊಂದರ ಆಡಳಿತ ಕೇಂದ್ರವಾಗಿದ್ದ ಇಲ್ಲಿಂದ ಈವರೆಗೆ ವರದಿಯಾಗಿರುವ ಎಂಟು ಶಾಸನಗಳಲ್ಲಿ ಎರಡು ತಾಮ್ರಶಾಸನಗಳಾದರೆ ಉಳಿದ ಆರು ಶಿಲಾಶಾಸನಗಳಾಗಿವೆ. ಅವುಗಳಲ್ಲಿ ಶ್ರೀಪುರುಷನ ಆಳ್ವಿಕೆಗೆ ಸೇರಿದ ತಾಮ್ರಶಾಸನ, ಕೆಸುಗೊಳದ ಒಡೆಯನಾದ ಬಿಣಮ್ಮನಿಗೆ, ಧನ್ನಗವಡಿ ಗ್ರಾಮವನ್ನು ಬ್ರಹ್ಮದೇಯವಾಗಿ ದತ್ತಿ ಬಿಟ್ಟ ಅಂಶವನ್ನು ದಾಖಲಿಸುತ್ತಾದರೂ ಶಾಸನಕ್ಕೂ ತಾಲೂಕಿಗೂ ಯಾವುದೇ ನೇರ ಸಂಬಂಧವಿಲ್ಲ. ಅದೇ ರೀತಿ ಸಾಳುವ ನರಸಿಂಹನ ಸರಗೂರು (ಚಾಮೇನಹಳ್ಳಿ) ತಾಮ್ರಶಾಸನ (೧೪೯೩) ಮಲ್ಲನಾಯಕ ಹಾಗೂ ತಿಪ್ಪಾಂಬರು ಚಾಕೇನಹಳ್ಳಿಯನ್ನು ಅಗ್ರಹಾರವನ್ನಾಗಿಸಿ ದೇಮಸಮುದ್ರ ಎಂದು ಹೆಸರಿಟ್ಟು ಬ್ರಾಹ್ಮಣರಿಗೆ ದತ್ತಿ ನೀಡಿದ್ದನ್ನು ತಿಳಿಸುತ್ತದೆ. ಇದು ನಾಗಮಂಗಲ ತಾಲೂಕಿನಲ್ಲಿರುವ ಗ್ರಾಮವಾಗಿದೆ. ಊರ ಪಂಚಬಸದಿ ಬಳಿಯಿರುವ ೧೪೨೩ರ ಶಾಸನ, ಮುಮ್ಮಡಿ ವಿಜಯಬುಕ್ಕರಾಯನ ಕಾಲದಲ್ಲಿ ಬಯನಾಡ ಮಹಾಪ್ರಭುವಾದ ಮಸಣೆಯಹಳ್ಳಿಯ ಕಂಪಣಗೌಡನು ತನ್ನ ಶ್ರೇಯೋಭಿವೃದ್ಧಿಗಾಗಿ, ಬೆಳಗುಳದ ಗುಂಮಟನಾಥನ ಸೇವಾವಿಧಿಗೆಂದು ತೋಟಹಳ್ಳಿ ಗ್ರಾಮವನ್ನು ಸರ್ವ ಆದಾಯದೊಂದಿಗೆ ನಾಗಣ್ಣ ಒಡೆಯನಿಂದ ಖರೀದಿಸಿ ಗುಮ್ಮಟಪುರ ಎಂಬ ಅಭಿದಾನದೊಂದಿಗೆ ಅದನ್ನು ದತ್ತಿ ಬಿಟ್ಟ ಅಂಶವನ್ನು ಅರುಹುತ್ತದೆ. ಕಾಳಮಂಟೇಶ್ವರ ಗುಡಿ ಗೋಡೆಯಲ್ಲಿರುವ ೧೪೧೬ರ ಶಾಸನ ಬಹಳ ಹಾಳಾಗಿದ್ದರೂ ಅನೇಕ ಗೌಡರುಗಳನ್ನು ಹೆಸರಿಸಿದೆ.

ಕಪಿಲ ನದಿಯ ಬಲದಂಡೆಗೆ ಅನತಿ ದೂರದಲ್ಲಿರುವ ಈ ಊರನ್ನು ನದಿಯ ನೀರು ಮೂರು ಕಡೆಯಿಂದಲೂ ಆವರಿಸಿದ್ದು, ಊರಲ್ಲಿ ಸೋಮೇಶ್ವರ ಹಾಗೂ

ಲಕ್ಷ್ಮೀನರಸಿಂಹರ ಪ್ರಾಚೀನ ದೇವಾಲಯಗಳಿವೆ. ಊರಾಚೆ, ಹೊಳೆಯ ದಂಡೆ ಮೇಲಿರುವ ಸೋಮೇಶ್ವರ ಗುಡಿಯು ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದ್ದು, ಪೂರ್ಣ ಜೀರ್ಣೋದ್ಧಾರಗೊಂಡಿದೆ. ಚೋಳ ಕುರುಹುಗಳನ್ನು ಹೊಂದಿರುವ ಈ ಗುಡಿ ಪರಿಸರದಲ್ಲಿ ದುರ್ಗೆಯ ಶಿಲ್ಪ ಹಾಗೂ ವೀರಗಲ್ಲುಗಳಿವೆ. ಹೊಳೆಗೆ ಹೋಗುವ ಮಾರ್ಗದಲ್ಲಿ ವೀರಗಲ್ಲು ಹಾಗೂ ಸಪ್ತಮಾತೃಕಾ ಶಿಲ್ಪಗಳಿವೆ. ಊರ ನಡುವೆ ಇರುವ ಲಕ್ಷ್ಮಿನರಸಿಂಹನ ಗುಡಿಯೂ (ಸುಮಾರು ೧೭ನೇ ಶತಮಾನ) ಕಂಠೀರವ ನರಸರಾಜರ ಕಾಲದ ರಚನೆಯಾಗಿದ್ದು, ಗರ್ಭಗೃಹ, ಅಂತರಾಳ ಹಾಗೂ ನವರಂಗಗಳನ್ನು ಹೊಂದಿದೆ. ಶ್ರೀವೈಷ್ಣವಯತಿ ರಾಮಾನುಜರು ಸಾಲಿಗ್ರಾಮಕ್ಕೆ ಹೋಗುವ ಮಾರ್ಗದಲ್ಲಿ ಇಲ್ಲಿ ತಂಗಿದ್ದರೆಂಬ ಐತಿಹ್ಯವಿದ್ದು ಈ ಗುಡಿಯ ಬದಿಯಲ್ಲೇ ಲಕ್ಷ್ಮೀದೇವಿಯ ಗುಡಿಯೂ ಇದೆ. ಇಲ್ಲಿರುವ ಅನಂತನಾಥ ಬಸದಿಯು ಅವಾರ್ಚೀನ ಕಾಲದಾಗಿದ್ದು, ಗರ್ಭಗೃಹದಲ್ಲಿ ಕಂಚಿನ ವಿಗ್ರಹವಿದ್ದು, ಜ್ವಾಲಾಮಾಲಿನಿ ಹಾಗೂ ಪದ್ಮಾವತಿ ಮೂರ್ತಿಗಳಿವೆ. ಉಳಿದಂತೆ ಊರಲ್ಲಿ ಬಸವೇಶ್ವರ, ಕಾಲಮಂಟೇಶ್ವರ, ಚಿಕ್ಕದೇವಮ್ಮ, ಚೌಡೇಶ್ವರಿ, ಸಂತೆಮಾರಮ್ಮ, ಮುಂತಾದ ಗುಡಿಗಳಿದ್ದು, ಎರಡು ಮಸೀದಿಗಳೂ ಇವೆ.

**ಸಾಗರೆ (೩,೩೬೯) :** ಹೆಗ್ಗಡದೇವನಕೋಟೆಯಿಂದ ಕೆಲವೇ ಕಿ.ಮೀ. ದೂರದಲ್ಲಿರುವ ಇದು ವಿಜಯನಗರ ಕಾಲದ ಶಾಸನಗಳಲ್ಲಿ 'ಚತುರ್ವೇದಿಮಂಗಲ ಸಾಗರೆ' ಎಂದೇ ಉಲ್ಲೇಖಿತಗೊಂಡಿದ್ದು ಏಳು ಶಾಸನಗಳು ಈವರೆಗೆ ಇಲ್ಲಿಂದ ವರದಿಯಾಗಿದೆ. ಅವುಗಳಲ್ಲಿ ೧೪೦೭ರ ನಾಲ್ಕು ಶಾಸನಗಳು ಅಲ್ಲಿಯ ಶಂಕರದೇವರ ಸೇವೆಗೆಂದು ಅರ್ಚಕರಿಗೆ ದತ್ತಿ ನೀಡಿದ್ದನ್ನು ದಾಖಲಿಸಿವೆ. ಅದರಲ್ಲೂ ವಿಶೇಷವಾಗಿ ಶಂಕರದೇವರ ಮುಂದಿರುವ ಸೂರ್ಯ ದೇವರ ಉದಯಾಸ್ತಮಾನದ ದೀವಿಗೆಗೆಂದು ಸಿಂಗಪಟ್ಟಣದ ಒಂದೂಕಾಲು ಗದ್ಯಾಣ ತಿಂಗಳಿಗೆ ಬರುವ ಬಡ್ಡಿ ಬ್ಯಾಳೆಯನ್ನು ದತ್ತಿ ಬಿಟ್ಟ ಅಂಶ ಉಲ್ಲೇಖವಾಗಿದೆ. ಊರ ಬಾಗಿಲಲ್ಲಿರುವ ೧೪೯೯ರ ಶಾಸನ ಸಾಗರೆ ಹಾಗೂ ಬೀಚನಹಳ್ಳಿ ಗ್ರಾಮಗಳನ್ನು ಅಗ್ರಹಾರದ ಮಹಾಜನಗಳಿಗೆ ದತ್ತಿ ಬಿಟ್ಟಿದ್ದನ್ನು ದಾಖಲಿಸುತ್ತದೆ. ಇಲ್ಲಿರುವ ಶಂಕರೇಶ್ವರ ದೇವಾಲಯವು ಸೂರ್ಯದೇವರನ್ನು ಮುಂಭಾಗದಲ್ಲಿ ಹೊಂದಿದ್ದ ಅಂಶ ಮೇಲಿನ ಶಾಸನಗಳಿಂದ ವೇದ್ಯವಾಗುತ್ತದೆ.

**ಸೋಗಳ್ಳಿ (೧೩೫) :** ಹೆಗ್ಗಡದೇವನಕೋಟೆಯಿಂದ ೧೫ ಕಿ.ಮೀ. ದೂರದಲ್ಲಿರುವ ಇದು ೧೧ನೆಯ ಶತಮಾನದ ಶಾಸನಗಳಲ್ಲಿ ಸೋಗೆಪಳ್ಳಿ ಎಂದೇ ಉಲ್ಲೇಖಿತಗೊಂಡಿದ್ದು, ಇಲ್ಲಿಂದ ಈವರೆಗೆ ನಾಲ್ಕು ವೀರಗಲ್ಲು ಶಾಸನಗಳೂ ಸೇರಿದಂತೆ ಆರು ಶಾಸನಗಳು ವರದಿಯಾಗಿವೆ. ಅವುಗಳಲ್ಲಿ ೧೧೦೭ರ ವೀರಗಲ್ಲು ಶಾಸನ, ಬೀರಬಯಲ್ನಾಡನ್ನು ರವಿಚಲ್ಲಮ್ಮನು ಆಳುತ್ತಿದ್ದಾಗ, ಬಂಕಿಯರಸನ ಹರಿಯನು ಹೊಸಹೊಳಲು ಹಾಗೂ ಕೋಗೆಹಳ್ಳಿಗೆ ಮುತ್ತಿಗೆ ಹಾಕಿ ತುರುಗಳನ್ನು ಸೆರೆಹಿಡಿದಾಗ, ಸೋಗೆಪಳ್ಳಿಯ ಸೋಮಯ್ಯನು ಬೆಳ್ತೂರು ಬಳಿ ತುರುಗಳನ್ನು ಬಿಡಿಸುವ ಸಲುವಾಗಿ ಹತನಾದ ವೀರನು ೧೦೦ ರಾಹುತರನ್ನು ೧೫೦೦ ಕಾಲಾಳುಗಳನ್ನೆದುರಿಸಿದನೆಂದು ಹೇಳುತ್ತದೆ. ಕೃಷ್ಣದೇವರಾಯನ

ಕಾಲಕ್ಕೆ ಸೇರಿದ ೧೫೨೨ರ ಶಾಸನ ಕೋಟೆ ಸೀಮೆಯ, ಬಯಲ್ನಾಡ ಸ್ಥಳದ ಸೋಗಹಳ್ಳಿ ಗ್ರಾಮವನ್ನು ರಾಯರ ಪುಣ್ಯಾರ್ಥವಾಗಿ, ಮಟಕೆರೆ ರಾಮೇಶ್ವರಲಿಂಗದ ಪೂಜೆಗೆಂದು ಬಸವಪ್ಪೊಡೆಯರು ದತ್ತಿ ಬಿಟ್ಟಿದನ್ನು ಹೇಳುತ್ತದೆ. ಇಲ್ಲಿಯ ಇನ್ನೊಂದು ಶಾಸನ ಪೆರ್ಬಾಣೇಶ್ವರ ದೇವರಿಗೆ ದತ್ತಿ ಬಿಟ್ಟದ್ದನ್ನು ದಾಖಲಿಸಿದೆ ಶಾಸನೋಕ್ತ ಬಾಣೇಶ್ವರ ಗುಡಿಯು ಪ್ರಾಚೀನದ್ದಾಗಿದ್ದು ಉಲ್ಲೇಖಾರ್ಹವಾಗಿದೆ.

**ಹಿರೆನಂದಿ (೫೪೩)** : ಹೆಗ್ಗಡದೇವನಕೋಟೆಯಿಂದ ೨೩ ಕಿ.ಮೀ. ದೂರದಲ್ಲಿರುವ ಹಿರಿನಂದಿಯು ಪ್ರಮುಖ ಸ್ಥಳವಾಗಿದ್ದು, ಕ್ರಿ.ಶ. ೧೦ನೆಯ ಶತಮಾನದಲ್ಲಿ ಆಡಳಿತ ನಡೆಸುತ್ತಿದ್ದ ಮೂರನೇ ರಾಚಮಲ್ಲನ ಕಾಲದಲ್ಲಿ ಈ ಊರನ್ನು 'ನಂದಿ' ಎಂದು ಕರೆದಿರುವುದು ಗಂಗರ ದಾಖಲೆಯಿಂದ ತಿಳಿದುಬರುತ್ತದೆ. ಗಂಗರ ಕಾಲದ್ದು ಎಂದು ಹೇಳುವ ಸೋಮೇಶ್ವರ ದೇವಾಲಯ ಇಲ್ಲಿದೆ. ಈ ದೇವಸ್ಥಾನವು ಊರಿನ ಪೂರ್ವಭಾಗದಲ್ಲಿದ್ದು ಗರ್ಭಗೃಹ ಮತ್ತು ತೆರೆದ ಅರ್ಧಮಂಟಪಗಳಿದ್ದು, ನಂತರದ ಸೇರ್ಪಡೆಯಾದ ಹೊಯ್ಸಳ ಶೈಲಿಯ ಸುಂದರವಾದ ಕುಸುರಿಯಿಂದ ಕೂಡಿದ ನವರಂಗ ಹೆಚ್ಚು ಆಕರ್ಷಣೀಯವಾಗಿದೆ. ನವರಂಗದ ಒಳಭಾಗದಲ್ಲಿ ಒಂದು ಮೀಟರ್ ಎತ್ತರದ ಸೂರ್ಯ, ವಿಷ್ಣು ಹಾಗೂ ಅಸೀನ ಗಣಪತಿಯ ಶಿಲ್ಪಗಳಿವೆ. ಗಂಗ ಎರೆಯಪ್ಪನ ಮರಣಾನಂತರ, ಬಯಲ್ನಾಡಿನ ದೊರೆಯಾಗಿ ಬಂದ ಭುವನಾದಿತ್ಯನ ಜೊತೆಯಲ್ಲಿ ಹೋರಾಟ ಮಾಡಿದ ನಂದಿಯ ಕೋರಂಟಿಯರಸನ ನಾಲ್ಕು ಜನ ಮಕ್ಕಳು ಮಡಿದದ್ದನ್ನು ತಿಳಿಸುವ ವೀರಗಲ್ಲು, ಸೋಮೇಶ್ವರ ದೇವಾಲಯದ ಮುಂಭಾಗದಲ್ಲಿದೆ. ಹತ್ತನೆಯ ಶತಮಾನದ ಈ ದಾಖಲೆ ಪ್ರಕಾರ ಗಂಗರಸರ ನಡುವೆ ಅಂತಃಕಲಹ ನಡೆದಿರಬಹುದೆಂದು ಊಹಿಸಬಹುದಾಗಿದೆ. ಹಿರಿನಂದಿಗೆ ಎರಡು ಕಿ.ಮೀ. ದೂರದಲ್ಲಿರುವ ಜಿನ್ನಹಳ್ಳಿ(೨೦೫)ಯು ಕಬಿನಿ ನದಿಯ ದಡದಲ್ಲಿದೆ. ಜಿನ್ನಹಳ್ಳಿಯ ದಕ್ಷಿಣಭಾಗದಲ್ಲಿ ಮಹದೇಶ್ವರ ದೇವಾಲಯವಿದೆ. ತೆರೆದ ಕಂಬಗಳಿಂದ ಕೂಡಿರುವ ಮಂಟಪ ನವರಂಗ ಮತ್ತು ಗರ್ಭಗುಡಿಗಳನ್ನು ಹೊಂದಿರುವ ಈ ದೇವಸ್ಥಾನವು ಸುಮಾರು ೯ನೇ ಶತಮಾನಕ್ಕೆ ಸೇರಿರಬಹುದೆಂದು ತಿಳಿದು ಬರುತ್ತದೆ. ನವರಂಗದ ಮುಂಭಾಗದಲ್ಲಿ ಇತ್ತೀಚೆಗೆ ನಿರ್ಮಿಸಲಾಗಿರುವ ದ್ವಾರಪಾಲಕರ ವಿಗ್ರಹಗಳಿವೆ. ಊರಿನ ಪ್ರವೇಶದ ಉತ್ತರದಲ್ಲಿ ನಿರ್ಲಕ್ಷಕ್ಕೆ ಒಳಗಾಗಿ ನಿಂತಿರುವ ವಿಷ್ಣುವಿನ ವಿಗ್ರಹ ಹೊಯ್ಸಳ ಶೈಲಿಯಲ್ಲಿದೆ. ಮಾಸ್ತಿಗಲ್ಲು ಹಾಗೂ ವೀರಗಲ್ಲುಗಳು ಊರ ಪ್ರವೇಶದ್ವಾರದಲ್ಲಿವೆ. ಸುಮಾರು ೯-೧೦ನೇ ಶತಮಾನಕ್ಕೆ ಸೇರಿದ ಗಂಗ ಸತ್ಯವಾಕ್ಯ ಪೆರ್ಮಾಡಿಯ ಆಳ್ವಿಕೆಯ ವೀರಗಲ್ಲು ಶಾಸನ ಎರೆಯಂಗನ ಮಗನಾದ ಮಾಚಿಗನ ಮರಣ ವೃತ್ತಾಂತವನ್ನು ತಿಳಿಸುತ್ತದೆ.

**ಹೆಗ್ಗಡದೇವನ ಕೋಟೆ (೧೨,೦೪೫)** : ತಾಲೂಕು ಕೇಂದ್ರವಾಗಿರುವ ಇದು ಜಿಲ್ಲಾ ಕೇಂದ್ರ ಮೈಸೂರಿನಿಂದ ೪೦ ಕಿ.ಮೀ. ದೂರದಲ್ಲಿದ್ದು, ಇಂದು ಪುರಸಭೆಯ ಆಡಳಿತಕ್ಕೊಳಪಟ್ಟಿದೆ. ತಾರಕಾ ನದಿಯ ಎಡದಂಡೆಯ ಮೇಲಿರುವ ಇದು ೧೮೮೬ರಷ್ಟು ಹಿಂದಿನಿಂದಲೇ ತಾಲೂಕು ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದ್ದು, ಅದಕ್ಕೂ ಮೊದಲು 'ಸರಗೂರು' ೧೮೬೪-೮೬ ರ ಅವಧಿಯಲ್ಲಿ ತಾಲೂಕು ಕೇಂದ್ರವಾಗಿತ್ತು. ಹೊಯ್ಸಳರ

ಅಧಿಕಾರಿ ಹೆಗ್ಗಡೆದೇವನು ಕೋಟೆ ಕಟ್ಟಿಸಿ ಈ ಸ್ಥಳವನ್ನು ತನ್ನ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡುದರಿಂದ, ಹೆಗ್ಗಡದೇವನ ಕೋಟೆ ಎಂಬ ಹೆಸರು ಇದಕ್ಕೆ ಬಂದಿರುವಂತೆ ತೋರುತ್ತದೆ. ಇಲ್ಲಿಂದು ಹೊಯ್ಸಳರ ಕಾಲದ ಕೋಟೆಯ ಅವಶೇಷಗಳು ಹಾಗೂ ವಿಜಯನಗರ ಕಾಲದಲ್ಲಿ ವಿಸ್ತಾರಗೊಂಡಿರುವ ಹೊಯ್ಸಳ ಕಾಲದ ವರದರಾಜ ದೇವಾಲಯಗಳಿವೆ. ವರದರಾಜಗುಡಿಗೆ ಹೊಯ್ಸಳರ ಕಾಲದ ಗರ್ಭಗೃಹ, ಅಂತರಾಳ ಹಾಗೂ ಮುಖಮಂಟಪಗಳಿದ್ದು, ವಿಜಯನಗರ ಕಾಲದಲ್ಲಿ ವಿಶಾಲವಾದ ರಂಗಮಂಟಪ ಹಾಗೂ ಅರ್ಧಮಂಟಪಗಳನ್ನು ನಿರ್ಮಿಸಲಾಗಿದೆ. ನಂತರದಲ್ಲಿ ತೆರೆದ ಮಂಟಪವನ್ನೂ ಸೇರಿಸಲಾಗಿದೆ. ಗರ್ಭಗೃಹದಲ್ಲಿ ವಿಜಯನಗರ ಶೈಲಿಯ ವರದರಾಜ ಶಿಲ್ಪವಿದ್ದು, ವಿಶ್ವಕಸೇನ ಹಾಗೂ ಆಳ್ವಾರ್ ಶಿಲ್ಪಗಳೂ ಇವೆ. ಈ ಗುಡಿಯ ಎಡಭಾಗದಲ್ಲಿರುವ ಅಮ್ಮನವರ ಗುಡಿಯಲ್ಲಿ ರಂಗನಾಯಕಿ ಶಿಲ್ಪವಿದೆ. ಇಲ್ಲಿರುವ ಸೋಮೇಶ್ವರ ಗುಡಿಯನ್ನು ಸಂಪೂರ್ಣ ನವೀಕರಿಸಲಾಗಿದ್ದು, ಒಳಗೆ ವಿಷ್ಣು, ಸೂರ್ಯ, ಮಹಿಷಮರ್ಧಿನಿ ಮುಂತಾದ ಶಿಲ್ಪಗಳಿವೆ. ಇದರ ಬದಿಯಲ್ಲೇ ವಿಶಾಲವಾದ ಕೆರೆ ಇದೆ. ನದೀತೀರದಲ್ಲಿ ವಿಜಯನಗರೋತ್ತರ ಕಾಲದ ರಾಮಲಿಂಗೇಶ್ವರ ದೇವಾಲಯವಿದ್ದು, ಶಿಥಿಲಾವಸ್ಥೆಯಲ್ಲಿದೆ. ಅದರ ಬದಿಯಲ್ಲೇ ಇರುವ ತಾರಕೇಶ್ವರ ಗುಡಿಯ ಬಳಿ ಹುಲಿಬೇಟೆ ವೀರಗಲ್ಲಿದೆ. ಅಲ್ಲದೆ ಅಲ್ಲಿ ಇನ್ನೂ ನಾಲ್ಕಾರು ವೀರಗಲ್ಲುಗಳಿವೆ. ಊರಲ್ಲಿ ವಾರಾಹಿ (ಮಾರಮ್ಮ), ಆಂಜನೇಯ, ಬಸವೇಶ್ವರ ಮುಂತಾದ ಗುಡಿಗಳಿದ್ದು, ಒಂದು ಮಸೀದಿ ಹಾಗೂ ಎರಡು ಇಗರ್ಜಿಗಳಿವೆ. ತಾಲೂಕು ಕಚೇರಿ ಆವರಣದಲ್ಲಿ ತೀರ್ಥಂಕರ ಶಿಲ್ಪವಿದೆ.

**ಹೆಬ್ಬಲಗುಪ್ಪೆ :** (೩,೬೮೪) ತಾಲೂಕು ಕೇಂದ್ರದಿಂದ ೧೬ ಕಿ.ಮೀ. ದಕ್ಷಿಣಕ್ಕೆ ಇರುವ ಈ ಊರಲ್ಲಿ ಪ್ರಾಚೀನ ಕಾಲದ ರಾಮಲಿಂಗೇಶ್ವರ ದೇವಸ್ಥಾನವಿದೆ. ಇಲ್ಲಿ ದೊರೆತಿರುವ ಸುಮಾರು ೮ನೇ ಶತಮಾನದ ಶಾಸನದಲ್ಲಿ ದುಗ್ಗಮಾರ ಬಸದಿಯ ಉಲ್ಲೇಖ ಇದೆ. ಶ್ರೀಪುರುಷನ ಆಳ್ವಿಕೆಗೆ ಸೇರಿದ ಈ ಶಾಸನದಲ್ಲಿ ಬರುವ ದುಗ್ಗಮಾರ ಶ್ರೀಪುರುಷನ ಮಗನಾಗಿದ್ದು, ಮೊದಲೇ ಗತಿಸಿದ್ದನು. ಈ ಬಸದಿಯನ್ನೂ ಅವನೇ ನಿರ್ಮಿಸಿರುವ ಸಾಧ್ಯತೆಗಳಿವೆ. ಆದರೆ ಶಿಥಿಲವಾಗಿರುವ ಅದನ್ನು ಇಂದು ಸ್ಪಷ್ಟವಾಗಿ ಗುರುತಿಸುವುದು ಕಷ್ಟ. ಬೆಳತೂರಿನಲ್ಲಿ ದೊರೆತಿರುವ ೧೦೮೯ರ ಶಾಸನದಲ್ಲಿ ಹೆಬ್ಬಲಗುಪ್ಪೆಯನ್ನು ಪೆರ್ವಯಲು ಎಂದು ಕರೆಯಲಾಗಿದೆ. ಮಹಾಸತಿ ದೇಕಬ್ಬೆಯ ಗಂಡನಾದ 'ಏಚ' ಈ ಊರಿನವನೆಂದು ತಿಳಿದು ಬರುತ್ತದೆ. ಇಲ್ಲಿಯ ರಾಮಲಿಂಗೇಶ್ವರ ದೇವಸ್ಥಾನ ಕಾಲಕಾಲಕ್ಕೆ ಮಾರ್ಪಾಡಾಗಿದೆ. ಮೂಲದಲ್ಲಿ ಇಟ್ಟಿಗೆಯ ನಿರ್ಮಾಣವಾಗಿದ್ದ ಈ ದೇವಾಲಯದ ಗರ್ಭಗೃಹದಲ್ಲಿ ಐದುವರೆ ಅಡಿ ಎತ್ತರದ ಮೂಲ ಲಿಂಗವಿದ್ದು, ಅಂತರಾಳದ ಬಾಗಿಲವಾಡದಲ್ಲಿ ದ್ವಾರಪಾಲಕರಿಲ್ಲದಿರುವುದು ಗಮನ ಸೆಳೆಯುತ್ತದೆ. ದ್ವಾರಬಂಧದ ಮೇಲ್ಭಾಗದಲ್ಲಿ ಗಜಲಕ್ಷ್ಮಿಯ ಸುಂದರ ಕೆತ್ತನೆ ಇದ್ದು, ಎರಡು ಆನೆಗಳ ಮಧ್ಯೆ ಲಕ್ಷ್ಮಿ ಆಸೀನಳಾಗಿದ್ದಾಳೆ. ಅದರ ಮೇಲೆ ಶಿಖರಗಳ ಕಿರುಮಾದರಿ ಹಾಗೂ ಚಾಮರಧಾರಿಯರಿದ್ದಾರೆ. ದೇವಾಲಯದ ಒಳಗೆ ಇರುವ ಮೂರ್ತಿಗಳು ಸುಮಾರು ೧೮ ಮತ್ತು ೧೯ ನೆಯ ಶತಮಾನಕ್ಕೆ ಸೇರಿದವುಗಳಾಗಿವೆ. ದೇವಾಲಯದ ಹೊರಗಿನ

ಚಂಡಿಕೇಶ್ವರ ಮಂಟಪದ ಮುಂದೆ ಇರುವ ವಿನಾಯಕನ ಎರಡು ವಿಗ್ರಹಗಳು ಪ್ರಾಚೀನದ್ದಾಗಿವೆ. ದೇವಸ್ಥಾನದ ಬಲ ಮೂಲೆಯ ಇಕ್ಕೆಲಗಳಲ್ಲಿ ಮಾಸ್ತಿಕಲ್ಲು ಹಾಗೂ ವೀರಗಲ್ಲುಗಳಿವೆ. ಇಲ್ಲಿನ ತಾತಲಿಂಗೇಶ್ವರನ ಗುಡಿ ಬಳಿಯಿರುವ ೧೩೪೬ರ ಶಾಸನ ನಾಗಣ್ಣನು ಥಿಮಯ್ಯ ದೇವರನ್ನು ಪ್ರತಿಷ್ಠೆ ಮಾಡಿಸಿದ ಅಂಶವನ್ನು ದಾಖಲಿಸಿದ್ದು, ಹೊಯ್ಸಳ ಶೈಲಿಯಲ್ಲಿರುವ ಈ ಗುಡಿ ಸರಳವಾಗಿದೆ. ಊರಿನ ಉತ್ತರಕ್ಕಿರುವ ತ್ರಿಲಿಂಗೇಶ್ವರ ದೇವಾಲಯದ ಮುಂದೆ, ಲಲಿತಾಸನದಲ್ಲಿ ಕುಳಿತಿರುವ ಪುರುಷ ಶಿಲ್ಪವಿದೆ. ಹಿಂದಕ್ಕೆ ಚಾಚಿರುವ ಜಟೆಯ ಹಿಂಭಾಗದಲ್ಲಿ ಕೇದಿಗೆಯ ಅಲಂಕಾರವಿದ್ದು, ಗುಂಡಾದ ಪ್ರಭಾವಳಿ ಇದೆ. ಶಂಖ ಕುಂಡಲ ಭುಜಕೀರ್ತಿಗಳನ್ನು ಧರಿಸಿರುವ ದ್ವಿಭುಜವುಳ್ಳ ಇವನಿಗೆ ಮೀಸೆ, ಕೋರೆದಾಡಿಗಳೂ ಇದ್ದು ಶಿಲ್ಪವೂ ಉಗ್ರವಾಗಿದೆ.

* * * *